(ii) ಸಿರ್ಸಿಯಲ್ಲಿ ಲೆವಿ ವಿಸಲಾತಿಯಲ್ಲಿ ಅಧಿಕಾರಿಗಳಿಂದ ರೈತರಿಗೆ ಕಿರುಕುಳ

ಶ್ರೀ ಎಸ್. ಆರ್. ಹೆಗಡೆ (ಅಂಕೋಲಾ).— ಸನ್ಮಾನ್ಯ ಅಧ್ಯಕ್ಷರೇ, ಈ ವಿಷಯದಲ್ಲಿ ಹಿಂದೆ ಒಮ್ಮೆ ಸರ್ಕಾರದ ಗಮನವನ್ನು ಸೆಳೆದಿದ್ದೇವೆ. ಸಿರ್ಸಿಯಲ್ಲಿ ರೈತರು ಸರ್ಕಾರದ ಲೆವಿ ನೀತಿಯಿಂದಾಗಿ ಬೇಸತ್ತು ಹೋಗಿದ್ದಾರೆ. ಇದನ್ನು ಪ್ರತಿಭಟಿಸಿ ಅವರು ಮುಷ್ಕರ ನಡೆಸುವ ತಿಳುವಳಿಕೆಯನ್ನು ನೀಡಿದ್ದಾರೆ. ಈ ವಿಷಯದಲ್ಲಿ ನಾನು ಹಿಂದೆ ಸರ್ಕಾರದ ಗಮನವನ್ನು ಸೆಳೆದಿದ್ದೇನೆ. ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ಮತ್ತು ಮಂತ್ರಿಯವರಿಗೆ ಸಹಿತ ತಿಳಿಸಿದ್ದೇನೆ. ಮಾನ್ಯ ಸಹಕಾರ ಸಚಿವರು ಸ್ವತಃ ಆದೇಶ ನೀಡಿದ್ದರೂ ಅದನ್ನು ಅಧಿಕಾರಿಗಳು ಪಾಲಿಸುತ್ತಿಲ್ಲ. ಮಾನ್ಯ ಆಹಾರ ಮಂತ್ರಿಗಳು ಸ್ವತಃ ಹೇಳಿದ್ದಾರೆ ಎಲ್ಲಾ ಗಾಡಿಗಳನ್ನು ಬಿಟ್ಟುಬಿಡಿ ಎಂದು, ಆದರೆ ಗಾಡಿಯನ್ನು ಮಾತ್ರ ಬಿಟ್ಟಿದ್ದಾರೆ ಬತ್ತವನ್ನು ಬಿಟ್ಟಿಲ್ಲ. ತಮ್ಮ ಸರ್ಕಾರದಲ್ಲಿ ಬುದ್ಧಿವಂತರು ಒಂದು ಆದೇಶವನ್ನು ಹೊರಡಿಸಿದ್ದಾರೆ. ಅದನ್ನು ಇಲ್ಲಿ ಓದುತ್ತೇನೆ.—

"I hereby order that the said paddy may be taken as levy to the Government, The Tahasildar, Sirsi should take action immediately and report"

ಇದಕ್ಕೆ ಏನು ಹೇಳುತ್ತಿದ್ದಾರೆ, ಹಿಂದಿನ ಸಲ ಕೂಡ ನಾನು ಕೇಳಿದಾಗ...

ಅಧ್ಯಕ್ಷರು :—ಹಿಂದೆ ನೀವು ಕೇಳಿದ್ದು ಗೊತ್ತಾಗಿದ್ದರೆ ಈಗ ಪ್ರಸ್ತಾಪಿಸಲಿಕ್ಕೆ ಸೇರಿಸುತ್ತಿರಲಿಲ್ಲ.

ಶ್ರೀ ಎಸ್. ಆರ್. ಹೆಗಡೆ.— ಹಿಂದೆ ಕೇಳಿದಾಗಲೂ ಸಹ ಪರಿಹಾರ ಕೊಟ್ಟಿಲ್ಲ. ಒಂದೊಂದು ಸೊಸೈಟಿಗಳಿಗೆ ಎರಡೂವರೆ ಸಾವಿರ ರೂಪಾಯಿ ಲುಕ್ಸಾನು ಆಗಿದೆ. ರೈತರಿಗೆ ಲುಕ್ಸಾನು ಆಗಿದೆ. ಇನ್ನು ೨೪ ತಾಸುಗಳ ಒಳಗೆ ಪರಿಹಾರ ಕೊಡಬೇಕು. ಮಾನ್ಯ ಮುಖ್ಯಮಂತ್ರಿಗಳು ಸಹ ಜಿಲ್ಲೆಗೆ ಬಂದಿದ್ದಾಗ ಜನರು ತಹಸೀಲ್ದಾರರು ಮತ್ತು ಜಿಲ್ಲಾಧಿಕಾರಿಗಳ ವಿರುದ್ಧ ದೂರು ಕೊಟ್ಟಿದ್ದಾರೆ. ಆದರೂ ಸಹ ಏನೂ ಕ್ರಮ ತೆಗೆದುಕೊಂಡಿಲ್ಲ.

ಶ್ರೀ ಜಿ. ಬಸವಣ್ಣಪ್ಪ (ಮಾನ್ಯ ಆಹಾರ ಮಂತ್ರಿ ನಾಗರೀಕ ಪೂರೈಕೆ ಸಚಿವರು).— ಸನ್ಮಾನ್ಯ ಅಧ್ಯಕ್ಷರೇ, ಈ ವಿಷಯದಲ್ಲಿ ಹಿಂದೆ ಸಾಕಷ್ಟು ಪ್ರಸ್ತಾಪ ಆಗಿದೆ. ನಿಜ ರೈತರು ಮತ್ತು ಕೋಆಪರೇಟಿವ್ ಸೊಸೈಟಿಗಳ ವೇರ್‌ಹೌಸ್ ಗೋಡೌನ್‌ಗಳಲ್ಲಿದ್ದ ರೈತರು ಕೊಟ್ಟ ಬತ್ತವನ್ನು ರೈಡ್ ಮಾಡಿ ಅದನ್ನು ಸೀಜ್ ಮಾಡಿದ್ದು ನಿಜ. ರೈತರಿಗೆ ಸಂಬಂಧಿಸಿದ ಬತ್ತವನ್ನು ಬಿಡುಗಡೆ ಮಾಡಬೇಕೆಂದು ಸರ್ಕಾರ ಆದೇಶ ಕೊಟ್ಟಿದೆ. ಪೊಲ್ಲಾಧಿಕಾರಿಗಳಿಗೂ ಕೂಡ ಆದೇಶವನ್ನು ಕೊಡಲಾಗಿದೆ. ಇದರ ಬಗ್ಗೆ ಪ್ರಶ್ನೆ ಸದಸ್ಯರು ತಳವಳ ಪಡಬೇಕಾಗಿಲ್ಲ.

(iii) ಬತ್ತ ಕಳ್ಳಸಾಗಾಣಿಕೆ ಮಾಡಿದವರನ್ನು ಹೊಸ ನಗರದಲ್ಲಿ ಹಿಡಿದಿರುವ ಬಗ್ಗೆ

ಶ್ರೀ ಬಿ. ಸ್ವಾಮಿರಾವ್ (ಹೊಸನಗರ)—ಮಾನ್ಯ ಅಧ್ಯಕ್ಷರೇ, ಹೊಸನಗರ ತಾಲ್ಲೂಕಿನ ನಗರ ಹೋಬಳಿ ಹುಲಿಕಲ್ಲುಗೇಟ್ ಬಳಿ ಎಂ. ಇ. ಜಿ. ೮೫೧೧ ಮತ್ತು ಸಿಎನ್‌ಎಕ್ಸ್ ೭೬೭೭ ಈ ನಂಬರಿನ ಎರಡು ಲಾರಿಗಳಲ್ಲಿ ಸುಮಾರು ಮೂರು ನೂರು ಚೀಲ ಭತ್ತವನ್ನು ತೆಗೆದುಕೊಂಡು ಹೋಗುವಾಗ ಅಲ್ಲಿರತಕ್ಕ ಪೋಲೀಸರು ಅವರ ಜೊತೆಗೆ ಕಾಳಗ ಮಾಡಿ ಅದರಲ್ಲಿ ಒಂದು ಲಾರಿಯನ್ನು ಹಿಡಿದರು. ಆ ಲಾರಿಯನ್ನು ಹಿಡಿಯುವಾಗ ಅವರ ಹತ್ತಿರ ಇರತಕ್ಕಂಥ ಬಂದೂಕಿನಿಂದ ಗುಂಡನ್ನು ಹಾರಿಸಿದರು. ಪೋಲೀಸಿನವರಿಗೆ ಸ್ವಲ್ಪ ಗಾಯವಾಗಿದೆ. ಜೊತೆಗೆ ಅವರು ತಮ್ಮ ಜೀವನದ ಮೇಲೆ ಆಸೆ ಬಿಟ್ಟು ಲಾರಿಯನ್ನು ಮತ್ತು ಕಳ್ಳರನ್ನು ಹಿಡಿದು ಪೋಲೀಸ್ ಸ್ಟೇಷನ್‌ನಲ್ಲಿ ಕೇಸು ಹಾಕಿ ಕೆಲವು ದಿವಸ ಬಂದೋಬಸ್ತಿನಲ್ಲಿ ಇಟ್ಟಿದ್ದರು ಶೂಟ್ ಮಾಡಿದಂಥ ಅಧಿಕಾರಿ ಯಾರೋ, ಆದರೆ, ಹರಿಶ್ಚಂದ್ರ ಎನ್ನುವವರು ಆ ಲಾರಿಯನ್ನು ಬಿಟ್ಟಿದ್ದಾರೆ ಆ ಅಪರಾಧಿ ಬಿಟ್ಟ ಲಾರಿಯಲ್ಲಿ ಜನರನ್ನು ಕೂರಿಸಿಕೊಂಡು ತಮಟೆ ಹೊಡೆದುಕೊಂಡು ಮೆರವಣಿಗೆ ಮಾಡಿದ್ದಾನೆ. ಇದರ ಜೊತೆಯಲ್ಲಿ ನಮ್ಮ ಸರ್ಕಾರ ಇರುವತನಕ ನಮಗೆ ಯಾರೂ ಏನೂ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿ ಬಿಟ್ಟು ಹೊರಟುಹೋಗಿದ್ದಾರೆ. ಮತ್ತು ಅಧಿಕಾರಿಗಳಿಗೆ ಬೆದರಿಕೆ ಹಾಕಿದ್ದಾರೆ. ಪತ್ರ ಕೂಡ ಬರೆದಿದ್ದಾರೆ. ಈ ಅಧಿಕಾರವನ್ನು ಅವರಿಗೆ ಕೊಟ್ಟವರು ಯಾರು ? ಅವರನ್ನು ಬಿಟ್ಟವರು ಯಾರು ? ಅವರು ಯಾವ ಪಾರ್ಟಿಗೆ ಸೇರಿದವರು ವಶಪಡಿಸಿಕೊಂಡ ಲಾರಿಯಲ್ಲಿ ಬಂದೂಕು ಇತ್ತು. ಅವರನ್ನು ಏಕೆ ಬಿಟ್ಟರು ಎನ್ನುವುದಕ್ಕೆ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.